4. ಅಧ್ಯಕ್ಷರ ಅಪ್ಪಣೆಕೋರಿ ಪ್ರಸ್ತಾಪಿಸಲಾದ ವಿಷಯಗಳು

(ಅ) ಬಳ್ಳಾರಿಯಲ್ಲಿ ಜೂನ್ ತಿಂಗಳಲ್ಲಿ ಬೆಂಕಿ ಆಕಸ್ಮಿಕದಿಂದ 11-12 ಗುಡಿಸಲುಗಳು ಸುಟ್ಟು ಹೋಗಿರುವುದು

ಶ್ರೀ ಎಂ. ದಿವಾಕರ ಬಾಬು (ಬಳ್ಳಾರಿ) : ಮಾನ್ಯ ಅಧ್ಯಕ್ಷರೆ, ಜೂನ್ ತಿಂಗಳಲ್ಲಿ ಬೆಂಕಿ ಆಕಸ್ಮಿಕದಿಂದ 11-12 ಗುಡಿಸಲುಗಳು ಬಳ್ಳಾರಿಯಲ್ಲಿ ಸುಟ್ಟು ಹೋದಮೇಲೆ, ಇಲ್ಲಿಯವರೆಗೂ ಅಲ್ಲಿ ಅವರಿಗೆ ರೀಹ್ಯಾಬಿಲಿಟೇಷನ್ ಮಾಡಿಲ್ಲ, ಅಲ್ಲೇ ಪುನರ್ವಸತಿ ಮಾಡಿಕೊಳ್ಳುತ್ತೇವೆ ಅಂದರೂ ಅದಕ್ಕೂ ಪರ್ಮಿಷನ್ ಕೊಡುತ್ತಾ ಇಲ್ಲ. ಮೊನ್ನೆ ಮುಖ್ಯಮಂತ್ರಿಗಳು ಬಂದಾಗ ಜನತಾ ದರ್ಶನದಲ್ಲಿ ರೆಪ್ರಸೆಂಟೇಷನ್ ಮಾಡಿದಾಗ, ರೀ-ಹ್ಯಾಬಿಲಿಟೇಷನ್ ಮಾಡಬೇಕು ಎಂದು ಹೇಳಿದಾಗ ಅಧಿಕಾರಿಗಳು ಇಲ್ಲ ಎಂದು ಮತ್ತೆ ಬರೆದಿದ್ದಾರೆ. ಈಗ ಅಲ್ಲಿಂದ 3 ತಿಂಗಳಿನಿಂದ ಬಿಸಿಲಿನಲ್ಲಿ, ಮಳೆಯಲ್ಲಿ ಅಲ್ಲೇ ಇದ್ದಾರೆ. ಅವರಿಗೆ ವಸತಿಯನ್ನು ಅಲ್ಲೇ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ನಾನು ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದಾಗ, ನಾವು ರೀ-ಹ್ಯಾಬಿಲಿಟೇಷನ್ ಫಾರ್ಮೇಷನ್ ಮಾಡುತ್ತಿದ್ದೇವೆ, ಫಲಾನುಭವಿಗಳ ಪಟ್ಟಿಯನ್ನು ಮಾಡುತ್ತಿದ್ದೇವೆ ಎಂದು ಹೇಳಿದರು. ಆಮೇಲೆ ಪುರಸಭೆಯ ಕಮೀಷನರ್ ಜೊತೆ ಡಿಸ್ಕಸ್ ಮಾಡಿ ಎಂದು ಹೇಳಿದರು. ಮುನಿಸಿಪಲ್ ಕಮೀಷನರಿಗೆ ಲೆಟರ್ ಬರೆದಾಗ, ಅವರು ನಮಗೆ ಸಂಬಂಧ ಇಲ್ಲ, ನಮ್ಮ ಜಮೀನು ಅಲ್ಲ ಅದು ಅಂತ ಹೇಳಿ ಅವರೊಂದು ಲೆಟರ್ ಬರೆದಿದ್ದಾರೆ. ಪುನಃ ಮತ್ತೆ ನಾನು ಜಿಲ್ಲಾಧಿಕಾರಿಗಳಿಗೆ ಸಂಪರ್ಕಿಸಿದರೆ, ಅವರು ನಾವು ಇದನ್ನು ಮಾಡುವುದಕ್ಕೆ ಬರುವುದಿಲ್ಲ, ಇದು, ಅರ್ಬನ್ ಡೆವಲಪ್ಮೆಂಟ್ ಅಥಾರಿಟಿಯವರು ಮೊತ್ತ ಲೇ-ಔಟನ್ನು ಮಾಡಿದಾಗ, ಅದರಲ್ಲಿ ವಸತಿ ಮಾಡಿಕೊಡುತ್ತೇವೆ ಎಂದು ಹೇಳುತ್ತಿದ್ದಾರೆ. ಆಶ್ರಯ ಕಮಿಟಿಯಲ್ಲಿ ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ. ಒಬ್ಬೊಬ್ಬರು ಒಂದೊಂದು ಸ್ಟೇಟ್ಮೆಂಟ್ ಕೊಡುತ್ತಿದ್ದಾರೆ. ಇದರ ಬಗ್ಗೆ ನನಗೆ ಅರ್ಥವಾಗುವುದಿಲ್ಲ. ಏಕೆಂದರೆ ಆ ಬಡ ಜನರನ್ನು ಅಲ್ಲೇ ಹಾಗೇ ಬಿಸಿಲಿನಲ್ಲಿ, ಮಳೆಯಲ್ಲಿ ಕೊಲ್ಲಬೇಕು ಎಂದು ಇದ್ದೀರೋ ಆ ಅಧಿಕಾರಿಗಳು ಅವರ ಮನಸ್ಸಿಗೆ ಬಂದ ಹಾಗೆ ಮಾಡುತ್ತಿದ್ದಾರೆ.

ಅಧ್ಯಕ್ಷರು : ನಾನು ಮಾಡಿಸುತ್ತೇನೆ. ಹೆಚ್ಚಿಗೆ ವಿವರ ಬೇಕಾಗಿಲ್ಲ, ಪ್ರಸ್ತಾಪ ಮಾಡುವುದಷ್ಟೆ. ವೈಜನಾಥ್ ಪಾಟೀಲ್ರವರೆ, ಬಳ್ಳಾರಿಯಲ್ಲಿ ಬೆಂಕಿ ಆಕಸ್ಮಿಕ ನಡೆದಿತ್ತು. ಅದರೊಳಗೆ ಕೆಲವರು ನಿರಾಶ್ರಿತರಾಗಿದ್ದಾರೆ. ಅವರಿಗೆ ಇನ್ನೂ ವಸತಿ ಕಲ್ಪಿಸಿಕೊಟ್ಟಿಲ್ಲ, ಯಾರೂ ಕ್ರಮ ತೆಗೆದುಕೊಂಡಿಲ್ಲ ಎಂದು ಹೇಳುತ್ತಿದ್ದಾರೆ. ದಯಮಾಡಿ ಆ ಕಡೆ ಗಮನ ಹರಿಸಿ ತಕ್ಷಣ ವ್ಯವಸ್ಥೆ ಏನು ಬೇಕೋ ಅದನ್ನು ಮಾಡಿಕೊಡಿ.

(ಆ) ಪಿ.ಯು.ಸಿ. ಪರೀಕ್ಷೆಯಲ್ಲಿ ನಕಲಿ ಅಂಕಪಟ್ಟಿ ಸೃಷ್ಟಿ

ಶ್ರೀ ಯು.ಆರ್. ಸಭಾಪತಿ (ಉಡುಪಿ) : ಸನ್ಮಾನ್ಯ ಅಧ್ಯಕ್ಷರೆ, ಪಿ.ಯು.ಸಿ. ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿರತಕ್ಕ ಕೆಲವು ವಿದ್ಯಾರ್ಥಿಗಳು, ಅವರನ್ನು ಉತ್ತೀರ್ಣಗೊಳಿಸಿ, ಪಿ.ಯು.ಸಿ. ಮಂಡಲಿಯಲ್ಲಿ ನಕಲಿ ಅಂಕ ಪಟ್ಟಿಯನ್ನು ಸೃಷ್ಟಿಸಿ ಆ ಮೂಲಕ ಕೆಲವು ವಿದ್ಯಾರ್ಥಿಗಳು ಮಣಿಪಾಲದಲ್ಲಿ ಇಂಜಿನೀಯರಿಂಗ್ ಕಾಲೇಜು ಹಾಗೂ ವೈದ್ಯಕೀಯ ಕಾಲೇಜಿನಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ಇದರ ಬಗ್ಗೆ 1993ರಲ್ಲಿ ಮಣಿಪಾಲ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರು ಈ ಬಗ್ಗೆ ದೂರು ಕೂಡ ಕೊಟ್ಟಿದ್ದರು. ದೂರು ಕೊಟ್ಟಮೇಲೆ, ಪಿ.ಯು.ಸಿ. ಮಂಡಲಿಯ ಹಿರಿಯ ಅಧಿಕಾರಿಗಳು ಅದರ ಬಗ್ಗೆ ತನಿಖೆ ಮಾಡಿ, ನಕಲಿ ಅಂಕ ಪಟ್ಟಿಯನ್ನು ಸ್ವಾಧೀನಪಡಿಸಿಕೊಂಡು ತನ್ಮೂಲಕ ಅದರ ಬಗ್ಗೆ ತನಿಖೆ ವರದಿ ಸಲ್ಲಿಸಿ 2 ವರ್ಷ ಆದರೂ ಕೂಡ ಈ ಬಗ್ಗೆ ಸಂಬಂಧಪಟ್ಟ ಯಾವುದೇ ಅಧಿಕಾರಿಗಳ ಮೇಲೆ ಕ್ರಮವನ್ನೂ ಕೈಗೊಳ್ಳಲಿಲ್ಲ. ಅನುತ್ತೀರ್ಣರಾದಂತಹ ಯಾವ ವಿದ್ಯಾರ್ಥಿಗಳು ಇದ್ದಾರೆ, ಆ ವಿದ್ಯಾರ್ಥಿಗಳು ಈಗಾಗಲೇ

VIII F-20